<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 01.12.2025</u>
<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಪಾಟೀ ಸವಾಲುಃ ಫಿರ್ಯಾದುದಾರರು ಪರ ವಕೀಲರಿಂದಃ</u>

1. ನನಗೆ ಫಿರ್ಯಾದುದಾರರು ಪರಿಚಯ ಇರುವುದಿಲ್ಲ. ನನಗೆ ಫಿರ್ಯಾದುದಾರರು ಯಾರು ಎಂಬುವುದು ಗೊತ್ತಿಲ್ಲ ಮತ್ತು ನಾನು ಆಕೆಯೊಂದಿಗೆ ವ್ಯವಹಾರ ಮಾಡಿಲ್ಲ. ಸಾಕ್ಷಿಗೆ ನಿಪಿ 1 ಚೆಕ್ಕನ್ನು ತೋರಿಸಲಾಗಿ ಅದು ನನ್ನ ಬಾಬ್ತು ಚೆಕ್ಕು ಮತ್ತು ಅದರಲ್ಲಿ ಇರುವ ಸಹಿ ನನ್ನದು ಎಂದು ನುಡಿಯುತ್ತಾರೆ. ಮುಂದುವರೆದು ಅದರಲ್ಲಿರುವ ಬರವಣಿಗೆ ತನ್ನದಲ್ಲ ಎಂದು ನುಡಿಯುತ್ತಾರೆ. ಆ ಚೆಕ್ಕಿಗೆ ಕುರಿತು ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನನಗೆ ನೋಟೀಸ್ಸನ್ನು ಕೊಟ್ಟಿದ್ದರು ಎಂದರೆ ಸರಿ, ಅದಕ್ಕೆ ನಾನು ಪ್ರತ್ಯುತ್ತರವನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ನೀಡಿದ ಮಾಹಿತಿ ಪ್ರಕಾರ ಪ್ರತ್ಯುತ್ತರವನ್ನು ನೀಡಲಾಗಿದೆ ಎಂದರೆ ಸರಿ.

2. ಫಿರ್ಯಾದುದಾರಳು ಹಂಡಿಗಾನಹಳ್ಳಿ ವಾಸಿ ಎಂದರೆ ಗೊತ್ತಿಲ್ಲ. ನಾನು ಸಲ್ಲಿಸಿದ್ದ ಓ.ಎಸ್. 5131/2022 ದಾವೆಯು ದಿನಾಂಕ 08-01-2025 ರಲ್ಲಿ ವಜಾ ಆಗಿದೆ ಎಂದರೆ ಸಾಕ್ಷಿ ನಾನು ಆ ದಾವೆಯಲ್ಲಿ ನ್ಯಾಯಾಲಯದ ಹೊರಗೆ ರಾಜೀ ಮಾಡಿಕೊಳ್ಳುವ ಉದ್ದೇಶದಿಂದ ಹಾಜರಾಗಿರಲಿಲ್ಲ ಹಾಗಾಗಿ ಅದು ವಜಾವಾಗಿದೆ. ಸಾಕ್ಷಿ ಮುಂದುವರೆದು ಕಾತ್ಯಯಣಿ ಎಂಬುವವರ ಜೊತೆ ನಾನು ಹಣದ ವ್ಯವಹಾರ ಮಾಡಿದಾಗ ಆಕೆ ನನ್ನಿಂದ ಪಡೆದುಕೊಂಡಿದ್ದ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಶಿಡ್ಲಘಟ್ಟ, ಗುಡಿಬಂಡೆ, ಮತ್ತು ಬೆಂಗಳೂರುನಲ್ಲಿ

ಚೆಕ್ಕು ಪ್ರಕರಣಗಳನ್ನು ಆಕೆಯು ಬೇರೆಯವರ ಮುಖಾಂತರ ಸಲ್ಲಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

3. ನಾನು, ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳನ್ನು ನನ್ನ ಮಾಹಿತಿಯ ಮೇರೆಗೆ ಆದಂತೆ ತಯಾರು ಮಾಡಿ ಸಲ್ಲಿಸಿಕೊಂಡಿದ್ದೇನೆ. ನಾನು, ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಫಿರ್ಯಾದುದಾರಳಾದ ಪಾಪಮ್ಮರವರು ನನ್ನ ಬಳಿ ರೂ. 35 ಸಾವಿರ ಹಣವನ್ನು ಶೇಕಡ 24% ಬಡ್ಡಿಯಂತೆ ಪಡೆದುಕೊಂಡಿದ್ದಳು ಎಂಬ ವಿಚಾರವನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿಯಲ್ಲಿ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಪಾಪಮ್ಮರವರು ಗಂಡ ಲಕ್ಷ್ಮಣ ಎಂಬುವವರು ಕೂಡ ನನ್ನ ಬಳಿ ರೂ. 1,87,000/- ಹಣವನ್ನು ಶೇಕಡ 24% ಪಡೆದುಕೊಂಡಿದ್ದರು ಎಂಬ ವಿಚಾರವನ್ನು ತಿಳಿಸಿದ್ದೇನೆ ಎಂದರೆ ಸರಿಯಲ್ಲ.

4. ನಿಡಿ-5 ರಿಂದ ನಿಡಿ-8 ಬ್ಯಾಂಕ್ ಸಂಬಂಧ ದಾಖಲೆಗಳು ದಿ. 15-07-2021 ಕ್ಕಿಂತ ಮೊದಲಿನ ಸಂಬಂಧ ದಾಖಲೆ ಎಂದರೆ ಸಾಕ್ಷಿ ನನಗೂ ಮತ್ತು ಕಾತ್ಯಯಣಿ ಎಂಬುವವರಿಗೆ 2012 ರಿಂದ ಹಣದ ವ್ಯವಹಾರ ನಡೆಯುತ್ತಿರುವ ಕಾರಣದಿಂದ ನಾನು ಆ ದಾಖಲೆಗಳನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಸೀರೆ ವ್ಯಾಪಾರದ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ಆ ರೀತಿ ಸೀರೆ ವ್ಯಾಪಾರದ

ಮೂಲಕ ಮಾಡುವ ಹಣದ ವ್ಯವಹಾರವು ನಿಡಿ-5 ರಿಂದ ನಿಡಿ-8 ರಲ್ಲಿದೆ ಎಂದರೆ ಸರಿ.

5. ನಾನು ಈ ಪ್ರಕರಣ ಆಗುವ ಮೊದಲಿನಿಂದಲೂ ಫಿರ್ಯಾದುದಾರಳ ಬಳಿ ಹಣದ ವ್ಯವಹಾರವನ್ನು ಮಾಡುತ್ತಿದ್ದೇನೆ ಎಂದರೆ ಸರಿ. ನಾನು 15-07-2021 ರಂದು ಫಿರ್ಯಾದುದಾರಳ ಬಳಿ ನನ್ನ ಸೀರೆ ವ್ಯಾಪಾರದ ಉದ್ದೇಶಕ್ಕಾಗಿ ಹಣದ ಅವಶ್ಯಕತೆ ಇದೆ ಎಂದು ಹಣ ಕೇಳಿದ್ದೆ ಎಂದರೆ ಸರಿಯಲ್ಲ. ಆ ನಂತರ ಫಿರ್ಯಾದುದಾರಳು ನನಗೆ ದಿ. 25-07-2021 ರಂದು ರೂ. 3 ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅದೇ ದಿನ ನಾನು ನಿಪಿ-1 ಚೆಕ್ಕನ್ನು ಫಿರ್ಯಾದುದಾರಳಿಗೆ ನಾನೇ ಬರೆದುಕೊಟ್ಟೆ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ನಿಪಿ-1 ಚೆಕ್ ನಾನು ಕಾತ್ಯಯಣಿಯೊಂದಿಗೆ ಮಾಡಿದ ಹಣದ ವ್ಯವಹಾರದ ಭದ್ರತೆಗಾಗಿ ಕಾತ್ಯಯಣಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ಕಾತ್ಯಯಣಿಯೊಂದಿಗೆ ನಾನು ಚೀಟಿ ವ್ಯವಹಾರ ಮಾಡಿದಾಗ ಆಕೆ ನನ್ನಿಂದ ಭದ್ರತೆಗಾಗಿ ಪಡೆದ ಚೆಕ್ಕುಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮತ್ತೇ ಮುಂದುವರೆದು ಚೀಟಿ ಹಣವನ್ನು ಕಾತ್ಯಯಣಿಯವರೇ ಬಳಸಿಕೊಂಡು ನನಗೆ ಮೋಸ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಈಗ ಹೇಳಿದ ವಿಚಾರ ನನ್ನ ಪ್ರಮಾಣ ಪತ್ರದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಫಿರ್ಯಾದಿದಾರಳಿಗೆ ಹಣ ವಾಪಸ್ಸು ನೀಡಬೇಕಾಗುತ್ತದೆ ಎಂದು ಸುಳ್ಳಾಗಿ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಬೇರೆ ಚೆಕ್ಕು ಪ್ರಕರಣಗಳು ಇವೆ ಎಂದರೆ ಸರಿ. ನಾನು ಈಗ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಹಾಜರುಮಾಡಿರುವ ದಾಖಲೆಗಳನ್ನು ಈಗ ಸೃಷ್ಟಿ ಮಾಡಿಕೊಂಡು ನೀಡಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.